ಮೊದಲೇ ತಿಳಿಸಿದ್ದಂತೆ ಮಾಲತಿ, ತನ್ನ ಗಂಡ ಶಂಕರನಾರಾಯಣ ಹಾಗೂ ಮಗನೊಂದಿಗೆ ದೇವಂಗಿ ಬಸ್‌ಸ್ಟ್ಯಾಂಡಿಗೆ ಬಂದಿದ್ದಳು. ಸುಮತಿಯ ಹಿಂದೆಯೇ ಇಳಿದ ಆತನನ್ನು ನೋಡಿ, 'ಏನೋ ಮಂಜು, ಬರೋದಿಕ್ಕೆ ಆಗೋದಿಲ್ಲಾಂತ ಕಾಗದ ಬರೆದಿದ್ದೆಯಂತಲ್ಲಾ? ಮತ್ತ್ಯಾಕೆ ಸವಾರಿ ಈ ಕಡೆ ಬಂತು? ಅಲ್ದೆ ಬರೋವಾಗ ಸುಮತಿಯನ್ನೂ ಜೊತೇಲೇ ಕರ್‍ಕೊಂಡು ಬಂದಿದೀಯಲ್ಲಾ!' ಎಂದು ಶಂಕರನಾರಾಯಣ ಹೇಳಿದಾಗ ಅವನು 'ಹೇಗೆ ಮೋಸ ಮಾಡಿದ ನೋಡು' ಎನ್ನುವಂತೆ ಸುಮತಿಯ ಕಡೆ ನೋಡಿ ತುಂಟ ನಗೆ ನಕ್ಕಿದ. ಮಾಲತಿ ಪರಿಚಯ ಮಾಡಿಕೊಟ್ಟ ಮೇಲೆಯೇ ಅವಳಿಗೆ ಗೊತ್ತಾಗಿದ್ದು ಮಂಜುನಾಥ ಮಾಲತಿಯ ಮೈದುನ, ಶಿವಮೊಗ್ಗ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದಾನೆ ಎಂದು. 5–6 ವರ್ಷದ ಹಿಂದೆ ಮಾಲತಿ ಮದುವೆಯಲ್ಲಿ ಅವನನ್ನು ನೋಡಿದ್ದು. ಇನ್ನೂ ಬಿ.ಎ. ಓದುತ್ತಿದ್ದ. ಮದುವೆ ಮನೆಯಲ್ಲಿ ಓಡಾಡುವ ಹೆಣ್ಣಿನವರ ಕಡೆಯ ಸೊಬಗಿನ ಹುಡುಗಿಯರ ಹಿಂದೆ–ಮುಂದೆ ತಿರುಗಾಡಿದ್ದ. ಆಗಲೇ ಯೌವನದ ಹೊಸಲಲ್ಲಿ ಕಾಲಿಡುತ್ತಿದ್ದ ಸುಮತಿಯ ಅಕ್ಕಪಕ್ಕದಲ್ಲೂ ಸುಳಿದಾಡಿದ್ದ. ಆದರೆ ಆಗ್ಲೂ ಈಗ್ಲೂ ಬೇಕಾದಷ್ಟು ಬೆಳೆದಿದ್ದ. ಮುಖದಲ್ಲಿ ವಿದ್ಯಾರ್ಥಿಯ ಕಳೆ ಹೋಗಿ ಲೆಕ್ಚರರ್ ಠೀವಿ ಮೂಡಿತ್ತು. ತುಟಿಯ ಮೇಲೆ ತೆಳುವಾದ ಮೀಸೆ. ಈಗಿನ ಯುವಕರ ಫ್ಯಾಶನ್ ಕ್ಯಾಸ್ಟ್ರೋ ಕುರುಚಲು ಗಡ್ಡ ಬೇರೆ.

ಹಗುರವಾಗಿ ಹರಟುತ್ತಾ. ಕಣ್ಣಿಗೆ ಕಣ್ಣು ಬೆರೆಸುತ್ತಾ ಮನೆ ಸೇರಿದಾಗ ಗಣಪತಿ ಭಟ್ಟರು ಅವರ ಪತ್ನಿ ಮೂಕಾಂಬಿಕಮ್ಮ ಆತ್ಮೀಯತೆಯಿಂದ ಸ್ವಾಗತಿಸಿದರು. ಮಂಜುನಾಥನನ್ನು ಕಂಡು ಅಚ್ಚರಿಯಾದರೂ ಸಂತಸಪಟ್ಟರು. ಕಾಫಿ, ಅವಲಕ್ಕಿಯ ಸಮಾರಾಧನೆ ಆಯಿತು.

ರಾತ್ರಿ ಬಿಸಿಬಿಸಿಯಾದ, ಬಣ್ಣದ ಸೌತೆಕಾಯಿಯ, ರುಬ್ಬಿಹಾಕಿದ ಮಸಾಲೆಯ ಹುಳಿ, ಅದಕ್ಕೆ ಮೇಲೆ ಕೊಬ್ಬರಿ ಎಣ್ಣೆ, ಮಧ್ಯೆ ಮಧ್ಯೆ ಬಾಯಿ ರುಚಿಗೆ ಹಲಸಿನಕಾಯಿ ಹಪ್ಪಳ, ಖಾರವಾದ ಮಾವಿನ ಮಿಡಿ ಉಪ್ಪಿನಕಾಯಿ ಬೇರೆ. ಬೆಂಗಳೂರಿನ ಅಮ್ಮನ ಅಡಿಗೆಗಿಂತ ಬೇರೆ ರುಚಿಯೇ ಇತ್ತು ಅದಕ್ಕೆ. ಎಲೆಯಿಂದ ತಲೆ ಎತ್ತಿದಾಗ ಎದುರಿಗೇ ಊಟಕ್ಕೆ ಕುಳಿತ ಮಂಜುನಾಥನ ಪ್ರೀತಿ ತುಂಬಿದ ನೋಟ ಮೃದುವಾಗಿ ಮೈ ಸವರಿದಂತೆ ಅಪ್ಯಾಯಮಾನವೆನಿಸಿ ಮುಖಕ್ಕೆಲ್ಲಾ ರಕ್ತ ನುಗ್ಗಿಬಂದಂತೆ ಅನ್ನಿಸುತ್ತಿತ್ತು. ಈಗೇಕೋ ಎದೆ ಸ್ವಲ್ಪ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಬಸ್ಸಿನಲ್ಲಿ ಹಾಗಾಗಿರಲಿಲ್ಲ. ಬಹುಶಃ ಅಲ್ಪ ಕಾಲಕ್ಕೆ ಜೊತೆಗೆ ಪ್ರಯಾಣ ಮಾಡುವವರು ಎಂದು ತಿಳಿದಿದ್ದುದರಿಂದ ಇರಬೇಕು. ಈಗ ಮಾತ್ರ ಪ್ರತಿಯೊಂದು ಹೆಜ್ಜೆಗೂ ತಾವಿಬ್ಬರೂ ಬಹಳ ಸಮೀಪವಾದಂತೆ, ಆತ್ಮೀಯರಾದಂತೆ ಅನ್ನಿಸುತ್ತಿತ್ತು.

ಊಟ ಮಾಡುವಾಗ ಭಟ್ಟರು, 'ನೋಡಮ್ಮ ಸುಮತಿ, ರಾತ್ರಿ ಹಿತ್ತಲಲ್ಲಿ ಓಡಾಡುವಾಗ ಸ್ವಲ್ಪ ನೋಡಿಕೊಂಡು ಓಡಾಡು. ಹಾಳು ಹಾವುಗಳ ಕಾಟ, ನಮಗೇನೋ ಅಭ್ಯಾಸವಾಗಿದೆ. ನೀವು ಬೆಂಗಳೂರಿನವರು ಹೆದರ್‍ತೀರಾ' ಎಂದಾಗ ಮೈ ಸ್ವಲ್ಪ ನಡುಗಿತು. ದಾರಿಯಲ್ಲಿ ಸಿಕ್ಕ ಹಾವಿನ ನೆನಪಾಯಿತು. ಅಂತೂ ಬರಿ ಸೌಂದರ್ಯ ಮಾತ್ರ ಇದೆ ಎಂದುಕೊಂಡರೆ ಅಲ್ಲೂ ಏನಾದರೂ ಕುಂದು ಇದ್ದೇ ಇರತ್ತಲ್ಲಾ ಎಂದು ಸ್ವಲ್ಪ ಬೇಸರವೂ ಆಯಿತು. ಮಂಜುನಾಥ ಮಲೆನಾಡಿನ ಹಾವುಗಳ ವರ್ಣನೆ ನಡೆಸಿದ್ದ– ಮನುಷ್ಯರನ್ನೂ ಪ್ರಾಣಿಗಳನ್ನೂ ಇಡಿಯಾಗಿ ನುಂಗುವ ದಾಸರ ಹಾವು, ಥಳ ಥಳ ಹೊಳೆಯುವ ಪುಟ್ಟ ಕನ್ನಡಿ ಹಾವು, ತಲೆಯ ಮೇಲೆ ಕೂದಲಿರುವ ಜುಟ್ಟು ಕಾಳಿಂಗ, ಏನೂ ತೊಂದರೆ ಮಾಡದೆ ಇರುವ ನೀರುಹಾವು, ಹೆಚ್ಚು ವಿಷವಿರುವ ಹಸಿರು ಹಾವು, ಬಾಳೆಎಲೆ, ವೀಳೆದೆಲೆಗಳಲ್ಲಿರುವ ಪುಟ್ಟ ಹುಳದಂತಹ ಹಾವುಗಳು ಇತ್ಯಾದಿ. ಸುಮತಿಯ ಗಾಬರಿಗೊಂಡ ಮುಖ ನೋಡಿದ ಮೂಕಾಂಬಿಕಮ್ಮ, 'ಸಾಕು ನಿಲ್ಸೋ ನಿನ್ನ ವರ್ಣನೇನ. ಬಂದ